148th, ಕ್ರ.ಸಂ. 16

# ಮಾನ್ಯ ವಿಧಾಪರಿಷತ್ತಿನ ಸದಸ್ಯರಾದ ಶ್ರೀ. ಮಂಜುನಾಥ ಭಂಡಾರಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸರ್ಕಾರದ ಉತ್ತರ

ಸರ್ಕಾರದ ಅವಧಿ ಮುಗಿಯುತ್ತಾ ಬಂದರೂ ಇನ್ನು ಬಾರದ ಪರಿಹಾರ, ಪ್ರವಾಹ ಸಂತ್ರಸ್ತರ ಸಂಕಷ್ಟ ಎಂಬ ಬಗ್ಗೆ ದಿನಾಂಕ:21-12-2022 ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

| ಕ್ರ.ಸಂ | ಪ್ರಸ್ತಾವನೆ | ಉತ್ತರ |
|---|---|---|
| 1 | ರಾಜ್ಯದಲ್ಲಿ 2019 ರಿಂದ 2022ರವರೆಗೆ 2ಲಕ್ಷ್ 45ಸಾವಿರ ಮನೆಗಳಿಗೆ ಹಾನಿಯಾಗಿದೆ. ಅದರಲ್ಲಿ ಪುನರ್ ನಿರ್ಮಾಣ ಆರಂಭಿಸಿದ 92,949 ಮನೆಗಳ ಪೈಕಿ ಶೇಕಡ 32% ರಷ್ಟು ಮನೆಗಳು ಪೂರ್ಣ ಆಗಿಲ್ಲ. | ರಾಜ್ಯದಲ್ಲಿ 2019 ರಿಂದ 2022ರವರೆಗೆ 3.02 ಲಕ್ಷ ಮನೆ ಹಾನಿಯಾಗಿದ್ದು ಈ ಪೈಕಿ 2,31ಲಕ್ಷ ಮನೆಗಳು ಪೂರ್ಣಗೊಂಡಿದೆ.<br><br>2019 ರಲ್ಲಿ 1,39,755 ಮನೆಹಾನಿಯಾದ ಪೈಕಿ ಶೇ.90 ರಷ್ಟು (1,25,182 ಮನೆಗಳು) ದುರಸ್ತಿ / ಪುನರ್ ನಿರ್ಮಾಣ ಕಾರ್ಯ ಮುಕ್ತಾಯಗೊಂಡಿದೆ.<br><br>2020 ರಲ್ಲಿ 39,171 ಮನೆಹಾನಿಯಾದ ಪೈಕಿ ಶೇ.88 ರಷ್ಟು (34,456 ಮನೆಗಳು) ದುರಸ್ತಿ / ಪುನರ್ ನಿರ್ಮಾಣ ಕಾರ್ಯ ಮುಕ್ತಾಯಗೊಂಡಿದೆ.<br><br>2021 ರಲ್ಲಿ 53,745 ಮನೆಹಾನಿಯಾದ ಪೈಕಿ ಶೇ.57 ರಷ್ಟು (30,619 ಮನೆಗಳು) ದುರಸ್ತಿ / ಪುನರ್ ನಿರ್ಮಾಣ ಕಾರ್ಯ ಮುಕ್ತಾಯಗೊಂಡಿದೆ.<br><br>2022 ರಲ್ಲಿ 70,977 ಮನೆಹಾನಿಯಾದ ಪೈಕಿ ಶೇ.57 ರಷ್ಟು (40,427 ಮನೆಗಳು) ದುರಸ್ತಿ / ಪುನರ್ ನಿರ್ಮಾಣ ಕಾರ್ಯ ಮುಕ್ತಾಯಗೊಂಡಿದೆ.<br><br>ಒಟ್ಟಾರೆಯಾಗಿ 2019 ರಿಂದ 2022ರವರೆಗೆ 3,03,648 ಮನೆಹಾನಿಯಾದ ಶೇ.76 ರಷ್ಟು (2,30,684 ಮನೆಗಳು) ಮನೆಗಳ ದುರಸ್ತಿ/ಪುನರ್ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ.<br><br>30,425 ಮನೆಗಳ ನಿರ್ಮಾಣಕಾರ್ಯ ಪ್ರಗತಿಯಲ್ಲಿದೆ (ಶೆ.10). ಇದರ ಬಹುತೇಕ ಬಾಗ 2022 ಮನೆಹಾನಿಯಾಗಿರುತ್ತದೆ.<br><br>ಮನೆಹಾನಿಯಾದ ಪೈಕಿ 37,105 ಮನೆಗಳ ನಿರ್ಮಾಣ ಕಾರ್ಯ ಪ್ರಾರಂಭವಾಗಿಲ್ಲ (ಶೇ.12). |
| 2 | ಶೇಕಡ 60%ರಷ್ಟು ಮನೆಗಳು ಗೋಡೆ ಬಾಕಿ ಹಂತದಲ್ಲಿ ಸಿಲುಕಿಕೊಂಡಿದೆ. | |
| 3 | 20109ರಲ್ಲಿ ಪ್ರವಾಹದಿಂದ ಕಷ್ಟಕ್ಕೆ ಸಿಲುಕಿಕೊಂಡ ಸುಮಾರು 15ಸಾವಿರ ಕುಟುಂಬಗಳು ಇನ್ನೂ ಸ್ವಂತ ಸೂರು ಹೊಂದಿಲ್ಲ. | ಪ್ರವಾಹದಿಂದ ಉಂಟಾದ ಮನೆಹಾನಿ ಮಾಹತಿಯನ್ನು ಜಿಲ್ಲಾಧಿಕಾರಿಗಳು ಜಂಟಿ ಸರ್ವೆ ಆಧಾರದ ಮೇರೆಗೆ ನಿರ್ಧರಿಸುತ್ತಾರೆ. ಅದರಂತೆ ಜಿಲ್ಲಾಧಿಕಾರಿಗಳು 3.03 ಲಕ್ಷ ಮನೆಹಾನಿ ದೃಢೀಕರಿಸಿದ್ದು, 2.30 ಲಕ್ಷ ಮನೆ ದುರಸ್ತಿ / ಪುನರ್ ನಿರ್ಮಾಣ ಕಾರ್ಯ ಮುಕ್ತಾಯಗೊಂಡಿದೆ. ಒಟ್ಟಾರೆ ಮನೆಹಾನಿಯಾದ ಪೈಕಿ ಶೇ.76 ರಷ್ಟು ದುರಸ್ತಿ / ಪುನರ್ ನಿರ್ಮಾಣ ಕಾರ್ಯ ಮುಕ್ತಾಯಗೊಂಡಿದೆ. |

| | | |
|---|---|---|
| F | ಕರಾವಳಿ ಭಾಗದಲ್ಲಿ ಮರಳಿನ ಕೊರತೆ ಹಾಗೂ ದುಪ್ಪಟ್ಟು ದರದಲ್ಲಿ ಮರಳು ಮಾರಾಟ | -ಅನ್ವಯಿಸುವುದಿಲ್ಲ- |
| 5 | ಆರಂಭದಲ್ಲಿ ಮಾಡಿದ ಎಡವಟ್ಟುಗಳಿಂದ ಈಗ ಹಣವಿದ್ದರೂ ಸಾಮಾಗ್ರಿ ಖರೀದಿಸಲಾಗದ ಸ್ಥಿತಿ ಇದೆ. | -ಅನ್ವಯಿಸುವುದಿಲ್ಲ- |
| 6 | ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಿ.ಆರ್.ಜಡ್. ಕಾರಣ ನೀಡಿ ಮರಳು ತೆಗೆಯಲು ಹಸಿರು ನ್ಯಾಯ ಪೀಠ ನಿಷೇಧ ಹೇರಿದೆ. | -ಅನ್ವಯಿಸುವುದಿಲ್ಲ- |
| 7 | ರಾಜ್ಯ ಸರ್ಕಾರ ಸರಿಯಾದ ಕಾನೂನು ಹೋರಾಟ ನಡೆಸದೆ ಇರುವುದರಿಂದ 1ವರ್ಷದಿಂದ ನದಿ ಮರಳು ಸಿಗುತ್ತಿಲ್ಲ. | -ಅನ್ವಯಿಸುವುದಿಲ್ಲ- |
| 8 | ಕಾಳ ಸಂತೆಯಲ್ಲಿ ಮರಳು ದರ ಗಗನಕ್ಕೇರಿದೆ. ಕಟ್ಟಡ ನಿರ್ಮಾಣ ಕೂಲಿ ಎರಡು ಪಟ್ಟು ಹೆಚ್ಚಾಗಿದೆ. ಸಿಮೆಂಟ್, ಕಲ್ಲು, ವಿದ್ಯುತ್ ಉಪಕರಣಗಳ ಸಾಗಾಟ ವೆಚ್ಚ ದುಪ್ಪಟ್ಟಾಗಿದೆ. ಈ ಖರ್ಚುಗಳ ಹೊರೆಯನ್ನು ನಿಭಾಯಿಸಲಾಗದೇ. ಸಂತ್ರಸ್ತರು ಹೈರಾಣಾಗಿರುತ್ತಾರೆ. | |

- ಅತಿವೃಷ್ಟಿಯಿಂದ ಹಾನಿಗೊಳಗಾದ ಮನೆಗಳಿಗೆ ಪ್ರಗತಿ ಹಂತವಾರು ರಾಜೀವಗಾಂಧಿ ವಸತಿ ನಿಗಮದ ತಂತ್ರಾಂಶದ ಮೂಲಕ ಪರಿಹಾರ ಮೊತ್ತ ಬಿಡುಗಡೆಗೊಳಿಸಲಾಗುತ್ತಿದೆ.

- ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳೊಂದಿಗೆ ನಡೆಸಿದ ಪರೀಶಿಲನಾ ಸಭೆಯಲ್ಲಿ ಪ್ರಾರಂಭಗೊಳ್ಳದ ಮನೆಗಳ ಮಾಲೀಕರಿಗೆ ನೋಟಿಸು ನೀಡಿ ಮನೆಗಳನ್ನು ಪ್ರಾರಂಭಿಸುವಂತೆ ಹಾಗೂ ಪ್ರಾರಂಭಗೊಳ್ಳದ ಮನೆಗಳನ್ನು ರದ್ದುಗೊಳಿಸುವಂತೆ ನಿರ್ದೇಶನ ನೀಡಿರುತ್ತಾರೆ.

**ಅತಿವೃಷ್ಟಿಯಿಂದ ಹಾನಿಗೊಳಗಾದ ಮನೆಗಳ ಫಲಾನುಭವಿಗಳಿಗೆ**

- 2019ರಲ್ಲಿ ರೂ. 2185.74ಕೋಟಿ,
- 2020ರಲ್ಲಿ ರೂ.367.21 ಕೋಟಿ
- 2021ರಲ್ಲಿ ರೂ. 704.05ಕೋಟಿ
- 2022ರಲ್ಲಿ ರೂ.421.10ಕೋಟಿ
- **ಒಟ್ಟು: ರೂ.3678.09 ಕೋಟಿಗಳನ್ನು ಮನೆಹಾನಿಯಾದ ಪಲಾನುಭವಿಗಳಿಗೆ ಪಾವತಿಯಾಗಿರತ್ತದೆ.**

ಇದಲ್ಲದೆ ಆರ್ಥಿಕ ಇಲಾಖೆಯು ದಿನಾಂಕ:14-12-2022ರಂದು **ರೂ.707.48ಕೋಟಿಗಳನ್ನು** ನಿಗಮದ ಅನುದಾನದಿಂದ ಮನೆ ಹಾನಿ ಪರಿಹಾರ ಪಾವತಿಸಲು ಬಿಡುಗಡೆಗೊಳಿಸಲಾಗಿರುತ್ತದೆ.

(ಆರ್. ಅಶೋಕ)
ಕಂದಾಯ ಸಚಿವರು.